ಅಣ್ಣಾಗುರೂಜಿಯವರ ಅನುಭವ

ಇಲ್ಲಿ ನನ್ನ ವೈಯ್ಯಕ್ತಿಕ ಜೀವನದ ಬಗ್ಗೆ ಒಂದೆರಡು ಮಾತು ಬರೆದರೆ ತಪ್ಪಾಗ ಲಿಕ್ಕಿಲ್ಲ. ಗಾಂಧೀಜಿಯವರ ವಿಚಾರ ಸರಣಿಯು ನನ್ನ ಜೀವನದ ಮೇಲೆ ಬಹಳಷ್ಟು ಪರಿ ಣಾಮ ಮಾಡಿದೆ. ಗಾಂಧಿಜಿಯವರ ವಿಹಾರಗಳನ್ನು ನನ್ನ ಮಟ್ಟಿಗೆ ನಾನು ಆದಷ್ಟು ಕಟ್ಟುನಿಟ್ಟಾಗಿ ಕಾರ್ಯರೂಪದಲ್ಲಿ ತರುವ ಪ್ರಯತ್ನ ಈ ವರೆಗೂ ಮಾಡುತ್ತ ಬುದಿ ದ್ದೇನೆ. ಆದರೆ ಅನ್ಯರು ಅಷ್ಟೇ ಕತೊರವಾಗಿ ಗಾಂಧಿವಿಚಾರಗಳನ್ನು ತಮ್ಮ ಜೀವನ ದಲ್ಲಿ ಅಳವಡಿಸಿಕೊಂಡಿರದಿದ್ದರೆ ಅವರ ಬಗ್ಗೆ ನನಗೆ ತಿರಸ್ಕಾರವಿಲ್ಲ. ನಾನು ಅದರ ಬಗ್ಗೆ ಎಂದೂ ಯಾರನ್ನೂ ಹೀಯಾಳಿಸಲಿಲ್ಲ.

ನನಗೆ ೧೯೩೦ ನೇ ಇಸವಿಯಲ್ಲಿ ಮೊದಲನೇ ಸಲ ೯ ತಿಂಗಳು ಶಿಕ್ಷೆಯಾಯಿತು. ಶಿಕ್ಷೆಯ ಮೊದಲು ೩ ದಿನ ನಾನು ಸೀ ಕ್ಲಾಸ ಕೈದಿಗಳ ಜೊತೆಗಿದ್ದೆ. ಜೇಲಿನಲ್ಲಿ ಕ್ಲಾಸು ಗಳಿದ್ದೆದ್ದು ನನಗೆ ಗೊತ್ತೇ ಇರಲಿಲ್ಲ. ಎ, ಬಿ. ಸಿ. ಕ್ಲಾಸುಗಳೆಂದು ಸರಕಾರದವರು ಮೂರು ವರ್ಗಗಳನ್ನು ಅದೇ ಸಾರೆ ಮಾಡಿದ್ದರು. ಎ ಕ್ಲಾಸಿನಲ್ಲಿ ಶ್ರೀ. ದಿವಾಕರ ರಂಗ ರಾಯರೂ ಬಿ ಕ್ಲಾಸಿನಲ್ಲಿ ಶ್ರೀ. ನಾರಾಯಣರಾವ ಜೋಶಿ, ಕೇಶವರಾಯ ಗೋಖಲೆ. ಬಳವಂತರಾವ ದಾತಾರ, ಬಾಬುರಾವ ಠಾಕೂರ, ವಾಮನರಾವ ಬಿದರಿ ಮೊದಲಾದ ವರಿ ದ್ದರು. ಉಳಿದ ನೂರಾರು ಕಾರ್ಯಕರ್ತರೆಲ್ಲ ಸೀ ಕ್ಲಾಸಿನಲ್ಲಿಯೇ ಇದ್ದರು. ದೇಶಕ್ಕಾಗಿ ಸೆರೆಮನೆ ಸೇರುವದೆಂದು ಒಂದೇ ಕೆಲಸಮಾಡಿ ಶಿಕ್ಷೆಯಾದವರಲ್ಲಿ ಹೀಗೇಕೆ ವರ್ಗ ಮಾಡ ಬೇಕು? ಬೀ ಕ್ಲಾಸಿನಲ್ಲಿ ಕುಳಿತ ನಮ್ಮ ಮುಖಂಡರಿಗೆ ನಾವು ಸೀ ಕ್ಲಾಸಿನಲ್ಲಿ ತಿನ್ನುತ್ತಿ ರುವ ಹಸಿಬಿಸಿ ರೊಟ್ಟಿ ಹಸರಾಣಿ ಭಾಜಿ ಕಾಣುವದಿಲ್ಲವೇ ? ಇವರೆಂಥ ಮುಖಂಡರು? ಎಂದು ಧಿಃಕರಿಸಿ ನಮ್ಮ ಕಾರ್ಯಕರ್ತರು ಮಾತಾಡುತ್ತಿದ್ದರು. ಆಗ ನಾನು "ಸರ ಕಾರ ಮಾಡಿದ ವರ್ಗಗಳು ಅನ್ಯಾಯದ್ದೇನೋ ನಿಜ. ಆದರೆ ನಾವೆಲ್ಲರೂ ಸೀ ಕ್ಲಾಸಿ ನಲ್ಲಿ ಕೆಟ್ಟ ಊಟ ಮಾಡುವದಕ್ಕಿಂತ ನಮ್ಮಲ್ಲಿಯ ಕೆಲವರಿಗಾದರೂ ಬೀ ಕ್ಲಾಸದಲ್ಲಿ ಚಲೋ ಊಟ ಸಿಗುತ್ತಿದ್ದರೆ ನಾವೇಕೆ ಸಂಕಟ ಪಡಬೇಕು" ಎಂದು ಸಮಾಧಾನ ಹೇಳು ತ್ತಿದ್ದೆ.

ನನ್ನ ದುರ್ದೈವದಿಂದಲೋ ಸುದೈವದಿಂದಲೋ ನನಗೆ ಮುಂದೆ ಬಿ ಕ್ಲಾಸು ದೊರೆಯಿತು. ಅಲ್ಲಿ ಹೋಗಿ ನಾವು ಕೆಲವರು ಒಂದು ಚಳವಳಿಯನ್ನೇ ಪ್ರಾರಂಭಿಸಿ ದೆವು. ಶ್ರೀ. ರಾಮಕೃಷ್ಣ ಪ್ರಭು, ಶ್ರೀಪಾದರಾವ ಕಿತ್ತೂರ ಮೊದಲಾದವರು ನನ್ನೊಂದಿಗೆ ಈ ಚಳವಳಿಯಲ್ಲಿದ್ದರು. ಎಲ್ಲ ರಾಜಕೀಯ ಕೈದಿಗಳಿಗೆ ಬಿ ಕ್ಲಾಸೊಂದೆ ಕೊಡಬೇಕು ಅಥವಾ ನಮಗೂ ಸಿ ಕ್ಲಾಸಿನದೇ ಊಟ ಕೊಡಬೇಕು ಎಂಬುದೇ ನಮ್ಮ

ಚಳವಳಿ ಆಗಿತ್ತು. ಶ್ರೀ. ದಿವಾಕರ, ದಾತಾರ ಮೊದಲಾದ ಕೆಲ ಮುಖಂಡರು ನಮ್ಮ ಚಳವಳಿಗೆ ಬೆಂಬಲಕೊಟ್ಟರು. ಸರಕಾರವು ನಮ್ಮ ಮೊದಲನೇ ಬೇಡಿಕೆಯನ್ನು ಮಾನ್ಯ ಮಾಡುವದು ಶಕ್ಯವಿದ್ದಿಲ್ಲ. ಅರ್ಥಾತ್ ನಮ್ಮ ಎರಡನೇ ಬೇಡಿಕೆಗೆ ಅವರ ಅಡ್ಡಿಯಿದ್ದಿಲ್ಲ. ಆದ್ದರಿಂದ ಬಿ ಕ್ಲಾಸಿನಲ್ಲಿಯೇ ನಮ್ಮ ಶಿಕ್ಷೆ ಮುಗಿಯುವ ವರೆಗೆ ನಾವು ೧೫ ಜನರು ಸಿ ಕ್ಲಾಸ ಊಟವನ್ನೇ ತಕ್ಕೊಳ್ಳುತ್ತಿದ್ದೆವು.

ಮುಂದೇ ನಾಲ್ಕು ಸಲ ನಾನು ಬೇರೆ ಬೇರೆ ಇಸವಿಯ ಚಳವಳಿಗಳಲ್ಲಿ ಜೇಲಿಗೆ ಹೋಗಿ ಶಿಕ್ಷೆ ಅನುಭವಿಸಿದೆ. ಈ ಎಲ್ಲ ಶಿಕ್ಷೆಗಳಲ್ಲಿಯೂ ನನಗೆ ಸಿ ಕ್ಲಾಸವನ್ನೇ ಕೊಟ್ಟವ್ವರಿಂದ ಎಲ್ಲರ ಜೊತೆಗೆ ಇದ್ದ ಆನಂದವನ್ನು ನಾನು ಅನುಭವಿಸಿದೆ. ಒನೇ ಸಲ ನನ್ನನ್ನು ಸ್ಥಾನ ಬದ್ಧತೆಯಲ್ಲಿಟ್ಟಿದ್ದರು. ಆಗಲೂ ನಾನು ಸಿ ಕ್ಲಾಸದ ಊಟವನ್ನೇ ತಕ್ಕೊಳ್ಳುತ್ತಿದ್ದೆ. ಆದರೆ ಡಬಟನ್ನೂ ಅಂತ ನನಗೆ ಸಿಗುತ್ತಿದ್ದ ಸವಲತ್ತುಗಳ ಉಪಯೋಗವನ್ನು ದುರ್ಬಲ ಮನಸ್ಸಿನ ನಮ್ಮ ರಾಜಕೀಯ ಕೈದಿಗಳಿಗಾಗಿ ಮಾಡಿದ್ದು, ಅದು ಜೇಲ ನಿಯಮಕ್ಕೆ ವಿರುದ್ಧವಾಗಿದ್ದರೂ ಆದನ್ನು ಮಾಡಿದೆ. ನನ್ನ ಮುಂದೆ ಒಂದು ದೃಷ್ಟಿಯಿತ್ತು– ಸ್ಥತಃ ಸಾಮಾನ್ಯರಂತೆ ಇರುವದು ಮತ್ತು ಸಾಧ್ಯವಿದ್ದ ಎಲ್ಲ ಸವಲತ್ತುಗಳನ್ನು ಅಶಕ್ತ ದುರ್ಬಲ ಮನಸ್ಸಿನ ನಮ್ಮ ಬಂಧುಗಳಿಗೆ ದೊರಕಿಸಿಕೊಡುವದು. ದೇವರು ಕೊನೆಯ ವರೆಗೂ ಈ ವ್ರತ ಪಾಲಿಸುವಂತೆ ನನಗೆ ಧೈರ್ಯ, ಸಂಯಮ ಮತ್ತು ಶಕ್ತಿಗಳನ್ನು ಒದಗಿಸಿದ್ದು ನನ್ನ ಸುದೈವ ! ನಾನು ಮಾಡಿದ್ದು ಸರಿಯೋ ಅಲ್ಲವೋ ತಿಳಿಯದು. ಆದರೆ ಅದರಿಂದ ನನ್ನ ಮನಸ್ಸಿಗೆ ಪೂರ್ಣ ಸಮಾಧಾನವಾಗಿದೆಯೆಂಬುದನ್ನು ಹೇಳದಿರಲಾರೆ.

ತಿಗಡೊಳ್ಳಿಯ ಶ್ರೀ. ಶಿವಪ್ಪ ಮಲಶೆಟ್ಟಿ ಎಂಬವರು ನಮ್ಮೊಂದಿಗೆ ಸ್ನಾನಬದ್ಧತೆಯಲ್ಲಿದ್ದರು. ಅವರಿಗೆ ಮೂಗಿನಲ್ಲಿ ಏನೋ ರೋಗವಾದದ್ದರಿಂದ ಹೊಲಸು ವಾಸನೆ ಬರುತ್ತಿತ್ತು. ಅದರಲ್ಲಿ ಅವರದೇನು ತಪ್ಪು ? ರೋಗ ಬರುವದು ಭೋಗಿಸುವದು ದೈವ ನಿರ್ಮಿತವಾಗಿರುವಾಗ ಇಂಥ ರೋಗಿಗಳೊಂದಿಗೆ ಅವರ ಮನಸ್ಸಿಗೆ ನೋವಾಗದಂತೆ ನಡೆಯುವದು ಮನುಷ್ಯಧರ್ಮ. ಆದರೆ ಅನೇಕರು ಅವರೊಂದಿಗೆ ಇರಲು ಇಷ್ಟಪಡುತ್ತಿದ್ದಿಲ್ಲ. ನನಗೆ ಇದರ್ನು ನೋಡಿ ಕನಿಕರವೂ ದುಃಖವೂ ಆಯಿತು. ನಮ್ಮ ಬರಾಕಿನಲ್ಲಿಯೇ ಅವರನ್ನು ಕರೆತಂದು ಅವರೊಂದಿಗೆ ಹರಟೆ ಹೊಡೆಯುವದು ನೂಲುವದು, ಅಭ್ಯಾಸ ಹೇಳುವದು ಮುಂತಾದುದನ್ನು ಮಾಡುತ್ತ ಸಾಧ್ಯವಿದ್ದಷ್ಟು ಅವರು ತಮ್ಮ ಕಷ್ಟ ಹಗರು ಮಾಡಿಕೊಳ್ಳುವಂತೆ ಮಾಡಿದೆ.